(c) Does not arise in view of replies to clause (b) above

(d) Does not arise.

SRI MALLIKARJUNA KHARGE.—May I know what is the policy of the Government regarding Minor Irrigation in backward areas ?

ಶ್ರೀ ಎಂ.ಎಂ ಜೆ. ಸದ್ಯೋಜಾತ.—ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿ ಮಾಡಬೇಕೆಂಬುದೇ ಸರ್ಕಾರದ ಆಭಿಲಾಷೆ.

SRI MALLIKARJUNA KHARGE.—What are the steps taken by the Government to improve the Hyderabad-Karnataka area and how many tanks the Government has investigated and how many reports the Government has received for construction of new tanks in those areas ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಬೇರೆ ಪ್ರಶ್ನೆ ಕೇಳಿದರೆ ಹೇಳಬಹುದು. ಒಂದು ಟ್ಯಾಂಕಿನ ವಿಷಯ ಮಾತ್ರ ಕೇಳಿದ್ದಾರೆ.

SRI MALLIKARJUNA KHARGE.—Atleast will the Hon'ble Minister reply how many new tanks have been sanctioned during this year and how many tanks the Government has investigated in this area and estimates prepared ?

SRI M. M. J. SADYOJATHA.—Only one tank has been sanctioned.

SRI MALLIKARJUNA KHARGE.—I want to know how many new tanks have been investigated by the Government and estimates prepared ?

SRI M.M.J. SADYOJATHA.—The details are not available with me at present.

SRI MALLIKARJUNA KHARGE.—I have given a number of representations to investigate the new tanks.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಪರಿಶೀಲನೆ ಮಾಡುತ್ತೇನೆ.

Prevention of fragmentation and Consolidation of holdings Act, 1966.

160 SRI K.H. RAMAKRISHNAIAH (Turuvekere).—Will the Minister for Revenue and Agriculture be pleased to state :—

(a) whether it has come to the notice of the Government that, on account of Karnataka Prevention of Fragmentation and Consolidation of Holdings Act, 1966, which is in force, the farmers are facing many difficulties ;

(b) whether it has also come to the notice of the Government that small farmers who have purchased five, ten guntas land are in difficulties due to non-transfer of kathas due to the above Act ?

SRI S. Bangarappa (Minister for Revenue and Agriculture)—

(a) The Karnataka Prevention of Fragmentation and Prevention of Consolidation of holdings Act-1966 has come into force on 1st May 1969, all over the State. According to Section 6 of the said Act fragmentation and according to section 3 alienation of Land is prohibited, if the land is less than the prescribed area. It has not come to the notice of the Government that the farmers have faced any difficulties due to this Act

(b) According to the Notification No. RD 132 ERT 76 dated 14-3-1979 issued under the Karnataka Prevention of Fragmentation and Consolidation of holdings Act 1966, fragementation was prohibited. Subsequently the Government in their Notification No. RD 132 ERG 76 dated 6th September 1979, gave permission for Registration of Land under section 3 of the Karnataka Prevention of Consolidation Act of 1966. the extent of Land up to which fragmentation of Land is prohibited is mentioned. No Complaints have been received from royats in this regard.

ಶ್ರೀ ಕೆ ಹೆಚ್. ರಾಮಕೃಷ್ಣಯ್ಯ —ಈ ಕಾನೂನು ರಿಜಿಸ್ಟರಲ್ಲಿ ಜಾರಿಗೆ ಬಂತು. ಈ ಕಾನೂನನ್ನು ವಿರೋಧ ಮಾಡತಕ್ಕಂಥವರ ಸಂಖ್ಯೆ ಎಷ್ಟು ಎಲ್ಲಿಯವರೆಗೆ ಬಂದಿದೆ, ಅವರ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಈ ಕಾನೂನಿಗೆ ಎಷ್ಟು ಜನ ವಿರೋಧವಾಗಿದ್ದರು ಎಂದು ಕೇಳುತ್ತಿದ್ದಾರೆ. ನನ್ನ ಹತ್ತಿರ ಆ ಮಾಹಿತಿ ಇಲ್ಲ. ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಒದಗಿಸುತ್ತೇನೆ.

ಶ್ರೀ ಕೆ. ಹೆಚ್. ರಾಮಕೃಷ್ಣಯ್ಯ —ಈ ಕಾನೂನು ಜಾರಿಗೆ ಬಂದಮೇಲೆ ಪ್ರತಿ ತಾಲ್ಲೂಕಿನಲ್ಲೂ ವಿರೋಧವಾಗಿ ಎಲ್ಲಾ ಟೀಣಿದೇಣಿಗಳು ನಿಂತು ಹೋಗಿ ಯಾವುದೇ ಒಂದು ಜಮೀನಿನ ಖಾತೆ ಪರ್ಗಾವರ್ಗಿ ಆಗಿಲ್ಲ. ಇದು ಆಗದೇ ಇರುವುದರಿಂದ ಯಾವ ವಿಧವಾದ ಸಾಲ ಸೌಲಭ್ಯಗಳನ್ನು ಸರ್ಕಾರದಿಂದಲಾಗಲೀ, ಸಹಕಾರ ಸಂಸ್ಥೆಗಳಿಂದಾಗಲೀ ರೈತರಿಗೆ ಪಡೆಯುವುದಕ್ಕೆ ಆಗಿಲ್ಲ. ರೈತರಿಗೆ ಇದರಿಂದ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಅಧ್ಯಕ್ಷರೇ, ಮೊದಲೇ ಮಾಡಿರುತಕ್ಕ ಕಾನೂನು ಪ್ರಕಾರ ನಾವು ಸೆಕ್ಷನ್ ೩ಕ್ಕೆ ಸಂಬಂಧಪಟ್ಟ ಷೆಡ್ಯೂಲ್ ಪ್ರಕಾರ ವರ್ಗೀಕರಣ ಮಾಡಿದ್ದೇವೆ ಇದರ ಕೆಳಗಡೆ ಬರುತಕ್ಕ ಭೂಮಿಯನ್ನು ಪರಭಾರೆ ಮಾಡುವ ಹಾಗಿಲ್ಲ. ಇದರಿಂದ ರೈತರಿಗೆ ತೊಂದರೆಯಾಗುವ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿಲ್ಲ. ಖಾತೆಗಳ ವರ್ಗಾವಣೆ ವಿಷಯ, ಸರ್ವೇ ವಿಷಯ ಫೋಡಿಗಳ ವಿಷಯ ಸರ್ಕಾರದ ಗಮನದಲ್ಲಿದೆ.

ಈಗ ಕೆಲವು ವಿಷಯಗಳಂ ಬಂದಿರುವುದು ನಿಜ. ಅದನ್ನು ಪರಿಶೀಲನೆ ಮಾಡಿ ರಿಜಿಸ್ಟ್ರೇಷನ್‌ಗೆ ಆದೇಶ ಮಾಡಲಾಗಿದೆ. ಇನ್ನು ಉಳಿದಿರತಕ್ಕದ್ದು ಸರಿಯಾಗಿ ಆಗಬೇಕು ಅಂತ ಹೇಳತಕ್ಕದ್ದನ್ನು ಒಪ್ಪುತ್ತೇನೆ, ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ ತಕ್ಕ ಕಾರ್ಯಕ್ರಮ ಹಾಕಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ರಾಮಕೃಷ್ಣಯ್ಯ.— ಅಧ್ಯಕ್ಷರೆ, ಒಂದು ಗುಂಟೆ ಎರಡು ಗುಂಟೆ. ಭೂಮಿಯ ಖಾತೆ ವರ್ಗಾವಣೆಯಾಗಿದೆ. ಅದನ್ನು ಉಲ್ಲಂಘನೆ ಮಾಡಿ ಮನೆ ಕಟ್ಟಿರತಕ್ಕದ್ದು ಇದ್ದರೆ ಅದನ್ನು ಕೆಡವಿ ಹಾಕಬೇಕು, ಮತ್ತೆ ಪೆನಾಲ್ಟಿ ಹಾಕಬೇಕು ಅಂತ ಸರ್ಕಾರ ಏನು ಮಾಡಿದೆ ಅದನ್ನು ನಿವಾರಿಸುತ್ತೀರಾ?

ಶ್ರೀ ಎಸ್. ಬಂಗಾರಪ್ಪ —ಅಧ್ಯಕ್ಷರೆ, ಯಾವುದೇ ಜಮೀನು ವರ್ಗಾವಣೆ ಆಗಿದ್ದರೆ, ರಿಜಿಸ್ಟ್ರೇಷನ್ ಆಗಿದ್ದರೆ ಯಾವುದನ್ನು ಹಾಳು ಮಾಡಬೇಕು ಅಂಥ ಉದ್ದೇಶ ಸರ್ಕಾರಕ್ಕೆ ಇಲ್ಲ. ಅಡ್ವಾನ್ಸ್ ಸಿಸ್ಟಮ್

ಆಫ್ ಅಗ್ರಿಕಲ್ಚರ್‌ನಲ್ಲಿ ಈ ಫ್ರಾಗ್‌ಮೆಂಟೇಷನ್, ಏತಕ್ಕೆ ಇಡಬೇಕು ಅಂತ ಇರುವುದು ನಿಜ. ಜಪಾನ್ ದೇಶ ತೆಗೆದುಕೊಂಡರೆ ವ್ಯವಸಾಯ ಮಾಡತಕ್ಕ ಪದ್ಧತಿಯಲ್ಲಿ ಕಡಿಮೆ ವಿಸ್ತೀರ್ಣ ಇದ್ದರೂ ಜಾಸ್ತಿ ಬೆಳೆ ಬೆಳೆಯತಕ್ಕ ಯೋಜನೆ ಮಾಡುತ್ತಾ ಇರುವುದು ಇದೆ. ಈ ನಿಷೇಧದ ಬಗ್ಗೆ ವಾದ ಇದೆ ಅದಕ್ಕೆ ನಾವು ಇನ್ನೊಂದು ವಿಚಾರ ಮಾಡಬೇಕಾಗುತ್ತದೆ. ಈಗ ಒಂದು ಜಾಯಿಂಟ್ ಫ್ಯಾಮಿಲಿ ಇರುತ್ತದೆ. ಆವರಿಗೆ ಮೊದಲು ೧೦ ಗುಂಟೆ ಜಮೀನು ಇದ್ದು ಅನಂತರ ಅವರು ಅದನ್ನು ತುಂಡು ಮಾಡಿಕೊಂಡು ಹೋಗಿ ಅರ್ಧ ಗುಂಟೆಗೆ ನಿಲ್ಲುತ್ತದೆ. ಅದನ್ನು ಯಾರೂ ಒಪ್ಪುವುದಿಲ್ಲ. ಆ ದೃಷ್ಟಿಯಿಂದ ಮಿನಿಮಮ್ ಇಷ್ಟು ಅಂಥ ಫಿಕ್ಸ್ ಮಾಡಿ ಅದು ರಿಜಿಸ್ಟ್ರೇಷನ್ ಆಗಬಾರದು ಅಂತ ವಿಚಾರ ಇಟ್ಟು ಉಳಿದಿರತಕ್ಕದ್ದನ್ನು ರಿಜಿಸ್ಟರ್ ಮಾಡಬಹುದು, ಪಟ್ಟಾ ಸರ್ವೆ ಆಗಬಹುದು ಅಂತ ಆಲೋಚನೆ ಮಾಡಿದ್ದು. ಮತ್ತೊಂದು ಅಭಿಪ್ರಾಯ ಈ ಕಾನೂನು ಬಗ್ಗೆ ಕೆಲವು ಸಾರಿ ಎತಕ್ಕೆ ಪರಿಶೀಲನೆ ಮಾಡಬಾರದು ಅಂತ ವಿಚಾರ ಮಾಡುತ್ತಿದ್ದೇವೆ.

ಶ್ರೀ ಎ. ಜಿ. ಕೊಡಗಿ.—ಅಧ್ಯಕ್ಷರೆ, Prevention of Fragmentation and Consolidation of Holdings Act, 1966ರ ಪ್ರಕಾರ ಬಹಳ ತೊಂದರೆಯಾಗಿದೆ ಎನ್ನುವುದು ಕಮ್ಮಿ ಗಮನಕ್ಕೆ ಬಂದಿದೆಯೇ ಅಂತ ಕೇಳಿದರೆ ಇಲ್ಲ ಅಂತ ಹೇಳಿದ್ದಾರೆ. ಸಮ್ಮ ದಕ್ಷಿಣ ಕನ್ನಡ ಜಿಲ್ಲೆಯಿಂದ ತೊಂದರೆಯಾಗಿದೆ ಎನ್ನುವ ಬಗ್ಗೆ ಒಂದು ನಿರ್ಣಯ ಕೊಟ್ಟಿದ್ದೇವೆ. ಅದರ ಆಧಾರದ ಮೇಲೆ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿದೆ. ದಿನಾಂಕ ೬-೯-೧೯೭೯ರ ಸರ್ಕಾರದ ಪ್ರಕಟಣೆ ಪ್ರಕಾರ ಮುನಃ ರಿಜಿಸ್ಟ್ರೇಷನ್ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದಾರೆ. ಮೊದಲು ಏನಿತ್ತು ಅಂದರೆ ಒಂದು ಮಿತಿ ಇಟ್ಟಿದ್ದರಿ. ಈ ಒಂದು ಮಿತಿಯನ್ನು ಸಡಿಸಲಿಕ್ಕೆ ಸಿದ್ಧರಿದ್ದೀರಾ ? ಈಗ ಮೊದಲು ಮಾಡಿದ ಕಾನೂನಿಗೆ ವಿರೋಧವಾಗಿ ರಿಜಿಸ್ಟರ್ ಮಾಡಿಕೊಳ್ಳಲಿಕ್ಕೆ ಅವಕಾಶ ಕೊಟ್ಟಿರುವುದರಿಂದ, ಈ ಕಾನೂನನ್ನು ತಿದ್ದುಪಡಿಮಾಡಿ ಸೂಕ್ತ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ದಿನಾಂಕ ೬-೯-೧೯೭೯ರ ಆಜ್ಞೆ ಹೊರಟಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಜನ ಸಾರ್ವಜನಿಕರು (ಮಾನ್ಯ ಸದಸ್ಯರು ಇರಬಹುದು) ಅವರು ಸರ್ಕಾರಕ್ಕೆ ಕೊಟ್ಟ ದೂರಿನ ಮೇಲೆ ಹೊರಡಿಸಿದ್ದು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈಗ ಮಾನ್ಯ ಸದಸ್ಯರು ಏನಾದರೂ ತೊಂದರೆ ಇದೆಯೇ ಎಂದು ಕೇಳಿದ್ದಾರೆ ಅದಕ್ಕೆ ಇಲ್ಲ ಎಂದು ಹೇಳಿದ್ದೇನೆ. ಈಗ ರಿಜಿಸ್ಟ್ರೇಷನ್‌ಗೆ ಆಲೋಚನೆ ಮಾಡಿದ್ದೇವೆ. ಆದ್ದರಿಂದ ತೊಂದರೆ ಬರಲಿಕ್ಕೆ ಕಾರಣ ಇಲ್ಲ. ಇನ್ನು ಮಿತಿ ಸಡಿಲಿಕೆ ಮಾಡಬೇಕು ಅಂದರೆ ಕ್ಲಾಸಿಫಿಕೇಷನ್ ಸೆಕ್ಷನ್ (೩) ಷೆಡ್ಯೂಲ್‌ನಲ್ಲಿ ಹೇಳಿದೆ. ಇನ್ನು ಈ ಪ್ರಿವೆನ್‌ಷನ್ ಆಫ್ ಫ್ರಾಗ್‌ಮೆಂಟೇಷನ್ ಮತ್ತು ಪ್ರಿವೆನ್‌ಷನ್ ಆಫ್ ಕನ್‌ಸಾಲಿಡೇಷನ್ ಆಕ್ಟ್ ಮೇಲೆ ಮೂಲಭೂತವಾಗಿ ಏತಕ್ಕೆ ಚರ್ಚೆ ಮಾಡುವುದು ಅಂತ ಒಂದು ವಾದ ಇದೆ. ಈಗ ಬೇರೆ ದೇಶದಲ್ಲಿ ಕೈಗೊಳ್ಳುವ ಸಿಸ್ಟಮ್ ಏನಿದೆ ನೋಡಿ ಸರ್ಕಾರ ಪರಿಶೀಲನೆ ಮಾಡುತ್ತದೆ. ಅದನ್ನು ಗಮನದಲ್ಲಿಟ್ಟುಕೊಂಡು ನೋಡಬೇಕಾಗುತ್ತದೆ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಪ್ರಶ್ನೆಗಳು ಮುಗಿದವು.

QUESTIONS FOR ANSWERS ON THE DAY
(but not taken up)

Service examinations

142 SRI P. A. PAWASHE (Uchagaon).—Will the Chief Minister be pleased to state:—

(a) whether it is a fact that most of the service (Departmental) Examinations are required to be written with the aid of books except a few service exminations;